| ೧ | ೨ | ೩ |
|---|---|---|
| ೯ | ಶ್ರೀ ಬಿ. ಸತೀಶ ಬಾಳಿಗ ಬಿನ್ ಬಿ. ಮಾಧವ ಬಾಳಿಗ ಬಟ್ಟೆ ವ್ಯಾಪಾರಿಗಳು, ಬಂಟ್ವಾಳ | ೧. ಬಂಟ್ವಾಳದಿಂದ- ಮಂಗಳೂರಿಗೆ ಹೋಗುವ ಸರ್ವಿಸುಗಳಿಗೆ ಬೆಳಿಗ್ಗೆ ಮತ್ತು ಸಂಜೆಯ ವೇಳೆ ಹೊರಡುವ ಸರ್ವೀಸುಗಳನ್ನು ೧೦ ನಿಮಿಷ ನಿಂತು ಹೊರಡುತ್ತವೆ ಆ ವೇಳೆಯನ್ನು ೨೦ ನಿಮಿಷ ಇದ್ದು ಹೋಗುವಂತೆ<br>೨. ದೂರ ಕ್ರಮಿಸುವ ವಾಹನಗಳನ್ನು ಬಂಟ್ವಾಳ ಪಟ್ಟಣದಲ್ಲಿ ಹೋಗುವಂತೆ ಮಾಡುವ ಬಗ್ಗೆ. |
| ೧೦ | ಶ್ರೀ ಯಂ. ಚಂದ್ರನಾಥ ಆಳ್ವ, ಉಪ ಪ್ರಧಾನ ವೆರವಾಯಿ ಮಂಡಲ ಪಂಚಾಯತ್ ಬಂಟ್ವಾಳ್ ತಾಲ್ಲೂಕು | ೧. ಆಳಿಕೆಗೆ ಸಮಯಕ್ಕೆ ಸರಿಯಾಗಿ ಬಸ್ಸುಗಳನ್ನು ಓಡಿಸುವಂತೆ ಕೋರಿರುವ ಬಗ್ಗೆ |
| ೧೧ | ಶ್ರೀ ಕಾರಿಂಜೇಶ್ವರ ದೇವಸ್ಥಾನ ಕಾರಿಂದ ಕಾವಳ ಮೂಡೂರು ಗ್ರಾಮ ಬಂಟ್ವಾಳ ತಾಲ್ಲೂಕು ದಕ್ಷಿಣ ಕನ್ನಡ | ೧. ಶ್ರೀ ಕಾರಿಂಜೇಶ್ವರ ದೇವಸ್ಥಾನದ ರತೋತ್ಸವವು ಪ್ರತಿ ವರ್ಷ ಮಾಡಲಾಗುತ್ತದೆ. ಆ ವರ್ಷ ವಿಶೇಷ ವಾಹನವನ್ನು ಓಡಿಸುವ ಬಗ್ಗೆ. |
| ೧೨ | ಶ್ರೀ ಎಸ್. ಅಬ್ದುಲ್‌ರಹಿಮಾನ್, ಬಂಟ್ವಾಳ ತಾಲ್ಲೂಕು | ೧. ಬಂಟ್ವಾಳ ತಾಲ್ಲೂಕಿನ ಗೋಳ್ತಮಜಲು, ಬೋಳ ವಾರು ಹಾಗೂ ಮಂಚಿ ಸೂರಿಬೈಲು ಕೊಳ್ನಾಡು ಗ್ರಾಮಗಳಿಗೆ ಬಸ್ಸಿನ ಸೌಕರ್ಯ ಒದಗಿಸುವ ಬಗ್ಗೆ. |
| ೧೩ | ಪ್ರಧಾನರು, ಮಂಡಲ ಪಂಚಾಯಂತ್ ಆಂಚೆ ಬಾಳಪನಿ ಬಂಟ್ವಾಳ ದ.ಕ. | ೧. ಸಾಲೆತ್ತೂರಿನಲ್ಲಿ ತಂಗುವ ಸರಕಾರಿ ಬಸ್ಸಿನಲ್ಲಿ ಮಡಿಪುವರೆಗೆ ಬರುವಂತೆ ಮಾಡುವ ಬಗ್ಗೆ |
| ೧೪ | ಶ್ರೀ ಬಿ. ಮಹಮ್ಮದ್ ಖುನ್ನಿ, ಕರ್ನಾಟಕ ಪ್ರದೇಶ ಯುವ ಜನತಾ ಸದಸ್ಯ ವಿಟ್ಲ ದಕ್ಷಿಣ ಕನ್ನಡ | ೧. ವಿಟ್ಲದಿಂದ ಬೆಂಗಳೂರಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ಒಂದು ರಾತ್ರಿ ಸರ್ವೀಸನ್ನು ಮಂಜೂರು ಮಾಡುವ ಕುರಿತು. |
| ೧೫ | ಶ್ರೀ ಯಂ. ಗಂಗಾಧರ ಭಟ್ ಅಧ್ಯಕ್ಷರು, ಶ್ರೀ ಸತ್ಯ ಸೇವಾ ಸಾಯಿ ಲೋಕಸೇವಾ ಟ್ರಸ್ಟ್, ಆಳಿಕೆ | ೧. ಆಳಿಕೆ-ಪುತ್ತೂರು ಮತ್ತು ಆಳಿಕೆ ಮಂಗಳೂರಿಗೂ ಹೊಸ ಸರ್ವೀಸನ್ನು ಓಡಿಸುವಂತೆ ಕುರಿತು. |
| ೧೬ | ವಿದ್ಯಾರ್ಥಿಗಳು, ಎಸ್. ಪಿ. ಎಸ್. ಕಾಲೇಜು, ಬಂಟ್ವಾಳ | ೧. ಧರ್ಮಸ್ಥಳ-ಪುತ್ತೂರು ಬಸ್ ದಿನಾ ಎಸ್. ಎ. ಎಸ್ ಕಾಲೇಜು, ಬಂಟ್ವಾಳ ಇಲ್ಲಿಗೆ ಬೆಳಿಗ್ಗೆ ೧೦ ಗಂಟೆಗೆ ಬಂದು ಸಂಜೆ ೪-೧೦ ಗಂಟೆಗೆ ಬಂದು ತಲುಪುವಂತೆ ವ್ಯವಸ್ಥೆ ಮಾಡುವಂತೆ ಕೋರಿ. |

ರಸ್ತೆ ಸಾರಿಗೆ ವಾಹನದ ಬಿಡಿ ಭಾಗಗಳನ್ನು ವಿಲೇವಾರಿ ಮಾಡುವ ಬಗ್ಗೆ

೪೦೩೪. ಶ್ರೀ ಬಿ. ಎ. ಉಮ್ಮರಬ್ಬ (ವಿಟ್ಲ) — ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯ ರಸ್ತೆ ಸಾರಿಗೆ ನಿಗಮದ ನಿರುಪಯುಕ್ತ ಬಿಡಿ ಭಾಗಗಳು ಟೈರು, ಟ್ಯೂಬು ಮತ್ತು ಇಂಜಿನ್ ಆಯಿಲ್ ಇತ್ಯಾದಿಗಳನ್ನು ಏನು ಮಾಡಲಾಗುತ್ತಿದೆ?

ಆ) ಗಿರಿಜಾರಂದೀಚೆಗೆ ಈ ವಸ್ತುಗಳ ವಿಲೇವಾರಿ ಬಗೆಗಿನ ವಿವರಗಳನ್ನು ನೀಡುವುದೆ?

ಶ್ರೀ ಸಿದ್ದರಾಮಯ್ಯ (ಸಾರಿಗೆ ಮಂತ್ರಿಗಳು).—

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಉಪಯೋಗಿಸಿ ನಿರುಪಯುಕ್ತವಾದ ಬಿಡಿ ಭಾಗಗಳು ಟೈರುಗಳು, ಟ್ಯೂಬುಗಳು ಮುಂತಾದವುಗಳನ್ನು ಟೆಂಡರ್–ಕಮ್ ಆಕ್ಷನ್ ಮೂಲಕ ಪ್ರತಿ ತಿಂಗಳು ವಿಲೇವಾರಿ ಮಾಡಲಾಗುತ್ತಿದೆ.

ಟೆಂಡರ್–ಕಮ್–ಆಕ್ಷನ್ ಅನ್ನು ಒಂದು ತಿಂಗಳು ಹುಬ್ಬಳ್ಳಿ ಮತ್ತೊಂದು ತಿಂಗಳು ಬೆಂಗಳೂರು ಪ್ರಾದೇಶಿಕ ಕಾರ್ಯಗಾರದಲ್ಲಿಯೂ ನಡೆಸಲಾಗುತ್ತಿದೆ.

ಉತ್ತರ ವಲಯದಲ್ಲಿರುವ ವಿಭಾಗಗಳಲ್ಲಿನ ನಿರುಪಯುಕ್ತ ಸಾಮಗ್ರಿಗಳನ್ನು ಹುಬ್ಬಳ್ಳಿ ಪ್ರಾದೇಶಿಕ ಕಾರ್ಯಾಗಾರದಲ್ಲಿಯೂ, ದಕ್ಷಿಣ ವಲಯದಲ್ಲಿನ ವಿಭಾಗಗಳಲ್ಲಿನ ಸಾಮಗ್ರಿಗಳನ್ನು ಬೆಂಗಳೂರು ಪ್ರಾದೇಶಿಕ ಕಾರ್ಯಾಗಾರದಲ್ಲಿಯೂ ಸೇರಿಸಿ ಟೆಂಡರ್–ಕಮ್–ಆಕ್ಷನ್ ಮೂಲಕ ಮಾರಾಟ ಮಾಡಲಾಗಿರುತ್ತದೆ.

ಹೆಚ್ಚು ತೂಕವಿರುವ ಹಾಗೂ ಸಾಗಿಸಲು ಅಪಾರ ಹೆಚ್ಚು ತಗಲುವ ನಿರುಪಯುಕ್ತ ವಸ್ತುಗಳಾದ ಹಳೆ ಟೈರುಗಳು, ಟ್ಯೂಬುಗಳು, ಬ್ಯಾರೆಲ್‌ಗಳು ಸ್ಪ್ರಿಂಗ್ ಬ್ಲೇಡ್ ಇತ್ಯಾದಿಗಳನ್ನು ಆಯಾ ವಿಭಾಗಗಳಲ್ಲಿಯೇ ಇಟ್ಟು ಮಾರಾಟವನ್ನು ಹುಬ್ಬಳ್ಳಿ ಮತ್ತು ಬೆಂಗಳೂರಿನ ಪ್ರಾದೇಶಿಕ ಕಾರ್ಯಾಗಾರದಲ್ಲಿ ನಡೆಸಿದರೂ ವಿತರಣೆ ಆಯಾ ವಿಭಾಗಗಳಲ್ಲಿಯೇ ಮಾಡಲಾಗುತ್ತಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಉಪಯೋಗಿಸಿದ ನಿರುಪಯುಕ್ತ ಇಂಜಿನ್ ಆಯಿಲ್‌ನ್ನು ಮೆ॥ ಬೆಂಗಳೂರು ಪೆಟ್ರೋಲಿಯಂ ಕೆಮಿಕಲ್ಸ್ (ಪ್ರೈ) ಲಿ. ಬೆಂಗಳೂರು ಹಾಗೂ ಮೆ. ಕರ್ನಾಟಕ ಆಯಿಲ್ ರಿಫೈನರೀಸ್, ಬೆಂಗಳೂರು ಇವರುಗಳಿಂದ ಪುನಃಶ್ಚೇತನಗೊಳಿಸಿ ಮತ್ತೆ ಟಾಪ್–ಅಪ್‌ಗಾಗಿ ನಮ್ಮ ವಾಹನಗಳಿಗೇ ಉಪಯೋಗಿಸಲಾಗುತ್ತಿದೆ.

೧೯೮೫ರಿಂದೀಚೆಗೆ ವಿಲೇವಾರಿಯಾದ ಈ ವಸ್ತುಗಳು (ನಿರುಪಯುಕ್ತ ಬಿಡಿ ಭಾಗಗಳು, ಟೈರು ಟ್ಯೂಬು ಬ್ಯಾರಲ್‌ಗಳು ಇತ್ಯಾದಿ ಹಾಗೂ ವಾಹನಗಳು) ವಿವರ ಈ ಕೆಳಕಂಡಂತಿದೆ.

| ಆ.ಸಂ. | ವರ್ಷ | ರೂ. ಕೋಟಿಗಳಲ್ಲಿ |
|---|---|---|
| ೧. | ೧೯೮೫–೮೬ | ೪.೪೬ |
| ೨. | ೧೯೮೬–೮೭ | ೫.೨೭ |
| ೩. | ೧೯೮೭–೮೮ | ೬.೩೪ |
| ೪. | ೧೯೮೮–೮೯ | ೩.೨೧ (ಆಗಸ್ಟ್ ೧೯೮೮ರವರೆಗೆ) |

## ಬೆಳ್ತಂಗಡಿಯ್ಲ್ಲಿತಾಲ್ಲೂಕಿನಲ್ಲಿ ಕ್ರೀಡಾ ಹಾಸ್ಟಲ್‌ನ್ನು ತೆರೆಯುವುದು

೪೬೧. ಶ್ರೀ ಕೆ. ವಸಂತ ಬಂಗೇರ, (ಬೆಳ್ತಂಗಡಿ).— ಮಾನ್ಯ ಸಮಾಜ ಕಲ್ಯಾಣ, ಯುವಜನ ಸೇವಾ ಮತ್ತು ಕ್ರೀಡಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೧) ಬೆಳ್ತಂಗಡಿ ತಾಲ್ಲೂಕಿನಲ್ಲಿ ಕ್ರೀಡಾ ಹಾಸ್ಟಲನ್ನು ತೆರೆಯುವಂತೆ ಹಲವು ಬಾರಿ ವಿನಂತಿಸಿ, ಕೊಂಡಿದ್ದರೂ ಈವರೆಗೆ ಸರ್ಕಾರ ಕ್ರಮ ಕೈಗೊಳ್ಳದಿರಲು ಕಾರಣವೇನು?

೨) ೧೯೮೯–೯೦ ನೇ ಸಾಲಿ ನಲ್ಲಾದರೂ ಈ ಬಗ್ಗೆ ಕ್ರಮಕೈಗೊಳ್ಳುವಿರಾ?

ಶ್ರೀ ಪಿ. ಜಿ. ಆರ್. ಸಿಂಧ್ಯ(ಸಮಾಜ ಕಲ್ಯಾಣ, ಯುವಜನ ಸೇವಾ ಮತ್ತು ಕ್ರೀಡಾ ಮಂತ್ರಿಗಳು).

೧) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗಾಗಲೇ ಮಂಗಳೂರು ಮತ್ತು ಪುತ್ತೂರಿನಲ್ಲಿ ಕ್ರೀಡಾನಿಲಯ ಮತ್ತು ಕ್ರೀಡಾ ವಿಭಾಗಗಳನ್ನು ತೆರೆಯಲಾಗಿದೆ. ಆದ ದರಿಂದ ಬೆಳ್ತಂಗಡಿಯಲ್ಲಿ ಕ್ರೀಡಾ ಹಾಸ್ಟೆಲ್‌ನ್ನು ತೆರೆಯಲು ಈಗಿನ ಆರ್ಥಿಕ ಪರಿಸ್ಥಿತಿಯಲ್ಲಿ ಅವಕಾಶವಿಲ್ಲ.

೨) ಉದ್ಭವಿಸುವುದಿಲ್ಲ.